# ಪ್ರಿಯಾಂಕಾ ರೆಡಿ

ಹಾಲಿವುಡ್‌ನಲ್ಲಿ ಬ್ಯುಸಿ ಆಗಿರುವ ಪ್ರಿಯಾಂಕಾ ಚೋಪ್ರಾ ಮರಳಿ ಮುಂಬೈಗೆ ಬರುವುದು ಖಚಿತವಾಗಿದೆ. ಮರಳಿ ಬರುವುದೆಂದರೆ ಇಲ್ಲೇ ಸೆಟ್ಲ್ ಆಗಲು ಅಲ್ಲ. ಆಕೆಯೀಗ ಅಂತರರಾಷ್ಟ್ರೀಯ ಮಟ್ಟದ ತಾರೆ. ಅಮೆರಿಕದಲ್ಲಿ ಆಕೆಗೆ ಸಿನಿಮಾ ಮತ್ತು ಟೀವಿ ಸೀರಿಯಲ್‌ನಲ್ಲಿ ಕೈತುಂಬ ಕೆಲಸವಿದೆ. ಆದರೆ ಈ ಮಧ್ಯೆ ಬಿಡುವು ಮಾಡಿಕೊಂಡು ಹಿಂದಿ ಸಿನಿಮಾವೊಂದರಲ್ಲಿ ನಟಿಸಲು ಆಕೆ ಒಪ್ಪಿಕೊಂಡಿದ್ದಾಳೆ. ಚಿತ್ರದ ಹೆಸರು– ಭಾರತ್. ಚಿತ್ರದ ನಾಯಕ ಸಲ್ಮಾನ್ ಖಾನ್.

‘10 ವರ್ಷಗಳ ಬಳಿಕ ಸಲ್ಮಾನ್ ಖಾನ್ ಜೊತೆಗೆ ಸಿನಿಮಾವೊಂದರಲ್ಲಿ ನಟಿಸುತ್ತಿದ್ದೇನೆ. ನಿಜಕ್ಕೂ ಕಾತುರಳಾಗಿದ್ದೇನೆ. ಕಳೆದ ಕೆಲವು ವರ್ಷಗಳಲ್ಲಿ ಬಾಲಿವುಡ್‌ನಿಂದ ದೂರವಾಗಿದ್ದರೂ ನನ್ನ ನಂಟೇನೂ ಕಡಿಮೆಯಾಗಿಲ್ಲ. ಅದೂ ಅಲ್ಲದೆ ನಿರ್ದೇಶಕ ಅಲಿ ಅಬ್ಬಾಸ್ ಜಫರ್ ಜತೆಗೂ ನಾನು ಹಿಂದೆ ಕೆಲಸ ಮಾಡಿದ್ದೇನೆ’ ಎಂದಿದ್ದಾಳೆ ಪ್ರಿಯಾಂಕಾ.

ಚಿತ್ರದ ನಿರ್ದೇಶಕ ಅಲಿ ಅಬ್ಬಾಸ್ ಈ ಹಿಂದೆ ‘ಗುಂಡೇ’ ಚಿತ್ರ ನಿರ್ದೇಶಿಸಿದ್ದು ಅದರಲ್ಲಿ ಪ್ರಿಯಾಂಕಾ ನಟಿಸಿದ್ದಳು. ಸಲ್ಮಾನ್ ಖಾನ್ ಜತೆಗೆ ಪ್ರಿಯಾಂಕಾ 10 ವರ್ಷಗಳ ಹಿಂದೆ ನಟಿಸಿದ್ದ ‘ಮುಜ್‌ಸೆ ಶಾದಿ ಕರೋಗಿ’ ಮತ್ತು ‘ಸಲಾಮ್ ಎ ಇಷ್ಕ್’ ಚಿತ್ರಗಳೂ ಸಾಕಷ್ಟು ಜನಪ್ರಿಯವಾಗಿದ್ದವು.

ಅಲಿ ಜಫರ್ ಈಗಾಗಲೆ ಲಂಡನ್‌ನಲ್ಲಿ ಚಿತ್ರದ ಆರಂಭಿಕ ಕೆಲಸವನ್ನು ಆರಂಭಿಸಿದ್ದಾರೆ. ಚಿತ್ರದ ಕಥೆಗೆ ಭಾರತದ ಸಂಸ್ಕೃತಿಯು ದೇಶ ವಿದೇಶಗಳಲ್ಲಿ ಹರಡಿರುವುದರ ಹಿನ್ನಲೆ ಇದೆಯಂತೆ. ಚಿತ್ರದ ಶೂಟಿಂಗ್ ಸ್ಪೈನ್, ಪೋರ್ಚುಗಲ್, ಪೋಲಂಡ್, ಮಾಲ್ಟಾಗಳಲ್ಲಿ ನಡೆಯಲಿದೆಯಂತೆ. ಇತ್ತೀಚೆಗೆ ನಿರ್ದೇಶಕ ಅಲಿ ಜಫರ್ ಮತ್ತು ನಿರ್ಮಾಪಕ ಅತುಲ್ ಅಗ್ನಿಹೋತ್ರಿ ಇಬ್ಬರೂ ನ್ಯೂಯಾರ್ಕ್‌ಗೆ ತೆರಳಿ, ಪ್ರಿಯಾಂಕಾ ಜತೆಗೆ ಮಾತನಾಡಿ ಕಾಲ್‌ಷೀಟ್ ಅಂತಿಮಗೊಳಿಸಿದ್ದಾರೆ.

ಈ ಚಿತ್ರದಲ್ಲಿ ಸಲ್ಮಾನ್ ಖಾನ್ 60 ವರ್ಷಗಳ ಅವಧಿಯ ಐದು ವಿಭಿನ್ನ ಲುಕ್‌ಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ವಿಶೇಷ. ಆದರಲ್ಲೂ 20ರ ದಶಕದ ಪಾತ್ರದಲ್ಲಿ ಸಲ್ಮಾನ್ ತೀರಾ ಯುವಕನಾಗಿ ಕಾಣಿಸಿಕೊಳ್ಳುತ್ತಾನಂತೆ. ಎಲ್ಲ ಸುಸೂತ್ರವಾಗಿ ನಡೆದರೆ 2019ರ ಈದ್ ವೇಳೆಗೆ ಚಿತ್ರ ತೆರೆ ಕಾಣಲಿದೆ.

